# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 690* |
| ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ |
| ಉತ್ತರಿಸುವ ದಿನಾಂಕ | 21.02.2024 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿರಾ ತಾಲ್ಲೂಕು ಚಿಕ್ಕನಹಳ್ಳಿಯ ದಾನಿ ಶ್ರೀ ಉಗ್ರೇಗೌಡರು ತುಮಕೂರು ಜಿಲ್ಲಾ ಖಜಾನೆಯಲ್ಲಿ ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:2440-2MUZ 675-09-04, ದಿನಾಂಕ:-24.03.1911ರಲ್ಲಿ ರೂ.24,000/-ಗಳ ಮೂಲಧನವನ್ನು ಸರ್ಕಾರದಲ್ಲಿ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಉದ್ದೇಶಕೋಸ್ಕರ ಈ ಠೇವಣಿ ಇಡಲಾಗಿದೆಯೆಂಬ ಮಾಹಿತಿ ನೀಡುವುದು; | ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ದಾನಿ ಶ್ರೀ ಉಗ್ರೇಗೌಡರು ತುಮಕೂರು ಜಿಲ್ಲಾ ಖಜಾನೆಯಲ್ಲಿ ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:2440-2 24.03.1911 ರಲ್ಲಿ ಕೃಷ್ಣ ರಾಜೇಂದ್ರ ವ್ಯವಸಾಯ ಧರ್ಮ ಪಾಠ ಶಾಲೆ ಮಕ್ಕಳ ಶಿಕ್ಷಣಕ್ಕಾಗಿ ಠೇವಣಿ ಇಟ್ಟಿರುವ ಬಗ್ಗೆ, ಶಿರಾ ತಾಲ್ಲೂಕು ಕಛೇರಿ/ತುಮಕೂರು ಜಿಲ್ಲಾ ಖಜಾನೆಯಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರು ಮಾಹಿತಿ ಸಲ್ಲಿಸಿರುತ್ತಾರೆ. |
| ಆ) | 1910 ರಿಂದ ಇಲ್ಲಿಯವರೆವಿಗೂ ಯಾವ ಯಾವ ಸಾಲಿನಲ್ಲಿ ಈ ಠೇವಣಿ ಹಣದ ಒಟ್ಟು ಬಡ್ಡಿ ಹಣವನ್ನು ಯಾವ ಇಲಾಖೆಯವರು ಯಾವ ಉದ್ದೇಶಕ್ಕೆ ವಿನಿಯೋಗಿಸಿರುತ್ತಾರೆ;(ಸಂಪೂರ್ಣ ಮಾಹಿತಿ ನೀಡುವುದು; | ಉಂಬಳಿಗಳ ಮೇಲಿನ ಬಡ್ಡಿ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ:2049-03-107-1-00(240ಸಿ) ಇದರಡಿ ಆರ್ಥಿಕ ಇಲಾಖೆಯಿಂದ ಮಂಜೂರಾಗಿ ಬಿಡುಗಡೆ ಯಾಗುತ್ತಿದ್ದ ಅನುದಾನವನ್ನು ಅಧೀನ ಕಛೇರಿಗಳು/ಇತರೆ ಇಲಾಖೆಗಳಿಗೆ ಬೇಡಿಕೆ ಪ್ರಸ್ತಾವನೆಯನ್ವಯ ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿ ಮಾಡುವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗುತ್ತಿತ್ತು.<br><br>ಸದರಿ ಲೆಕ್ಕ ಶೀರ್ಷಿಕೆಯಡಿ 2015-16ನೇ ಸಾಲಿನಿಂದ ಬೇಡಿಕೆಗನುಗುಣವಾಗಿ ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯಾಗದೆ ಇದ್ದು, ಠೇವಣಿ ಇರಿಸಿರುವ ಬಗ್ಗೆ ದಾಖಲೆ/ಬಾಂಡ್‌ಗಳನ್ನು ಒದಗಿಸುವಂತೆ ಆರ್ಥಿಕ ಇಲಾಖೆಯಿಂದ ಸೂಚಿಸಿದ್ದು, ಅದರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿ/ ಸಾರ್ವಜನಿಕ ಶಿಕ್ಷಣ ಇಲಾಖೆ/ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆಗಳಿಗೆ ಪತ್ರ ಬರೆದು ಅಗತ್ಯವಿರುವ ಮಾಹಿತಿ/ದಾಖಲೆಗಳನ್ನು ಒದಗಿಸಲು ಕೋರಲಾಗಿರುತ್ತದೆ.<br><br>2014-15 ನೇ ಸಾಲಿನವರೆವಿಗೂ ಬಿಡುಗಡೆ ಮಾಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಯಾವ ಉದ್ದೇಶಕ್ಕೆ / ಯಾವ ಸಂಸ್ಥೆಗಳಿಗೆ ವಿನಿಯೋಗ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಪತ್ರ ಬರೆಯಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಇನ್ನು ಮುಂದಾದರೂ ಸರ್ಕಾರದ ಆದೇಶ ಸಂಖ್ಯೆ:6436-50A & I 195-15-02 ದಿನಾಂಕ:06.05.1916 ರಂತೆ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಈ ಠೇವಣಿ ಹಣದ ಬಡ್ಡಿಯನ್ನು ಶ್ರೀ ಉಗ್ರೇಗೌಡರ ಮೂಲ ಉದೇಶದಂತೆ ಚಿಕ್ಕನಹಳ್ಳಿಯ ಸರ್ಕಾರಿ ಶ್ರೀ ಕೃಷ್ಣರಾಜೇಂದ್ರ ವ್ಯವಸಾಯ ಧರ್ಮ ಪಾಠಶಾಲೆಯ (ಎಸ್.ಕೆ.ವಿ.ಡಿ) ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿನಿಯೋಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? | ಠೇವಣಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಸಂಬಂಧಪಟ್ಟ ಸಂಸ್ಥೆ/ ಆಯಾಯ ಇಲಾಖೆ/ಅಧೀನ ಕಛೇರಿಯಿಂದ ಸಲ್ಲಿಸಿದ್ದಲ್ಲಿ, ನಿಯಮಾನುಸಾರ ಪರಿಶೀಲಿಸಿ ಸರ್ಕಾರದಿಂದ ಬಡ್ಡಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. |

**(ಕ.ಟಿ.ಆ.ಮೇ)**

ಸಂಖ್ಯೆ: ಕಂಇ 41 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು